ಪ್ರಿನ್ಸಿಪಾಲ್ ಆಗಿದ್ದಾಗ ಸಹೋದ್ಯೋಗಿಯೊಬ್ಬರು ಮೀಟಿಂಗ್‌ನಲ್ಲಿ 'ಈ ಪ್ರಿನ್ಸಿಪಾಲರು ಬರವಣಿಗೆಯಲ್ಲಿ ಗಂಡಸರನ್ನು ಬೈಯುತ್ತಾರೆ, ಇದರಿಂದ ಗಂಡಸರಿಗೆ ಅನ್ಯಾಯವಾಗುತ್ತದೆ' ಅಂತ ಕ್ಯಾತೆ ತೆಗೆದಿದ್ದರು. ಕುಂಬಳಕಾಯಿ ಕದ್ದವನು ತನ್ನ ಬೆನ್ನು ನೋಡಿಕೊಂಡಂತೆ, ನಿಮಗೇಕೆ ಅದು ಚುಚ್ಚುತ್ತದೆ ಅಂತ ಕೇಳಿ ಅವರನ್ನು ಸುಮ್ಮನಾಗಿಸಬೇಕಾಯಿತು.

**ಆಶಾ:** ಇವೆಲ್ಲಾ ಹೆಣ್ಣಿನ ದಾರಿಹೋರಾಟ ಎಷ್ಟು ಸಂಕೀರ್ಣ ಅನ್ನೋದನ್ನೇ ಹೇಳುತ್ತೆ. ನಾನು ಕೂಡಲ ಸಂಗಮದಲ್ಲಿ ಬಸವಣ್ಣನ ಮಹಿಳಾ ನಿಲುವುಗಳ ಬಗ್ಗೆ ಮಾತನಾಡಿದಾಗ ಅದೆಷ್ಟು ಗಲಾಟೆ ಆಯ್ತು. ಕೊನೆಗೆ ಆಯೋಜಕರು ಇವರಿಗೆ ಈ ವಿಷಯ ಕೊಟ್ಟಿದ್ದೇ ತಪ್ಪಾಯ್ತು ಅಂತ ಹೇಳೋತನಕ ಅದು ಮುಂದುವರೀತು. ಹೆಣ್ಣಿನ ನೋಟ ಅನ್ನುವುದು ಬೇರೆಯದ್ದು ಅಂತಲ್ಲ, ಅದೂ ಮಾನವೀಯ ನೋಟದ ಇನ್ನೊಂದು ಮಗ್ಗುಲು ಅಂತ ಒಪ್ಪಿಕೊಳ್ಳೋಕೆ ಎಷ್ಟು ಕಷ್ಟ ನೋಡಿ.

ನಿಮ್ಮ 'ಬಿಡುಗಡೆ' ಕತೆಯನ್ನ ಓದಿದ ಅನೇಕ ಹೆಣ್ಣುಮಕ್ಕಳು ಇದು ತಮ್ಮದೇ ಕತೆ ಅಂತ ಪ್ರತಿಕ್ರಿಯಿಸಿದ್ದಾರೆ. ಆ ಅನುಭವಗಳು ಹೇಗಿದ್ದವು?

**ವೀಣಾ:** 'ಬಿಡುಗಡೆ' ಕತೆ ಮೊದಲು ಒಂದು ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಯಿತು, ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ. ಅದು ಪ್ರಕಟವಾದ ಮರುದಿನವೇ ನನಗೊಂದು ದೂರವಾಣಿ ಕರೆ ಬಂತು. ಯಾರು ಅಂತ ನಾನು ಕೇಳಿದಾಗ, 'ನಾನು ಸರೋಜಾ' ಅಂತ ಉತ್ತರ ಬಂತು. 'ಬಿಡುಗಡೆ' ಕತೆಯ ನಾಯಕಿ ಸರೋಜಾ ಜೀವನದ ಬಗ್ಗೆ ಸಾಮಾನ್ಯ ಹೆಣ್ಣುಮಕ್ಕಳಂತೆ ಸಣ್ಣ ಸಣ್ಣ ಕನಸುಗಳನ್ನು ಮನದ ತುಂಬಾ ಹೊತ್ತು ಗಂಡನ ಮನೆಗೆ ಕಾಲಿಟ್ಟವಳು. ಆದರೆ ಆಕೆಯ ಗಂಡನೆಂಬ ಗಂಡಸು ವ್ಯವಸ್ಥಿತವಾಗಿ ಆಕೆಯ ಎಲ್ಲಾ ಕನಸುಗಳ ಕೊಲೆ ಮಾಡುತ್ತಾನೆ. ಕೊನೆಗೆ ಆತ ಸತ್ತಾಗ ಆಕೆಗೆ ದುಃಖವಾಗುವ ಬದಲು ಬಿಡುಗಡೆ ದೊರೆತಂತೆ ಅನ್ನಿಸುತ್ತದೆ. ಅನೇಕ ಹೆಣ್ಣುಮಕ್ಕಳು ನನಗೆ ತಿಂಗಳುಗಟ್ಟಲೆ ದೂರವಾಣಿಯಲ್ಲಿ, ಪತ್ರದಲ್ಲಿ 'ಇದು ತಮ್ಮದೇ ಅನುಭವ' ಅಂತ ತಿಳಿಸುತ್ತಲಿದ್ದರು. ಈ ಪುಸ್ತಕದ ಬಿಡುಗಡೆಯ ಸಂದರ್ಭದಲ್ಲಿ ಖ್ಯಾತ ವಿಮರ್ಶಕರೊಬ್ಬರು, 'ಅದೇನು ಬೆಳಿಗ್ಗೆ ಎದ್ದು ಚಹಾ ಮಾಡದಿದ್ದರೆ ಆ ಗಂಡ ಕೆಟ್ಟವನು ಅನ್ನುತ್ತೀರೇನು ನೀವು' ಅಂತ ಕೇಳಿದ್ದರು. ಹೆಣ್ಣಿನ ಸಾದಾ ಸರಳ ಕನಸುಗಳೂ ಈ ಪುರುಷಲೋಕಕ್ಕೆ ಅರ್ಥವಾಗುವುದಿಲ್ಲ ಮಾತ್ರವಲ್ಲ, ಅದು ಅವರಿಗೆ ಬೇಕಾಗಿಯೂ ಇಲ್ಲ. ಹೆಣ್ಣಿನ ಮಟ್ಟಿಗೆ ಎಲ್ಲವೂ ದುಬಾರಿ. ಬಹುಶಃ ಈ ಕಾರಣಕ್ಕೇ ಮಧ್ಯಮವರ್ಗದ ಅನೇಕ ಹೆಣ್ಣುಮಕ್ಕಳಿಗೆ ಇದು ತಮ್ಮದೇ ಕತೆ ಅನ್ನಿಸಿದ್ದು.

**ಆಶಾ:** ನಿಮ್ಮ ಒಟ್ಟೂ ಬರವಣಿಗೆಯಲ್ಲಿ ಹೆಣ್ಣನ್ನ ತನ್ನ ಆಳ್ವಿಕೆಯಲ್ಲಿಯೇ ಉಳಿಸಿಕೊಳ್ಳೋದಿಕ್ಕೆ ನಮ್ಮ ಮೌಲ್ಯವ್ಯವಸ್ಥೆ ನಿರಂತರವಾಗಿ ನಡೆಸುವ ಪ್ರಯತ್ನಗಳನ್ನ ಗುರುತಿಸೋದು ಕಾಣಿಸುತ್ತೆ. ನನಗನ್ನಿಸುತ್ತೆ, ಇದನ್ನ ನೀವು ಹೆಣ್ಣಿನ ಹೋರಾಟ ಅದಕ್ಕೆ ವ್ಯವಸ್ಥೆ ಒಡ್ಡುವ ಪ್ರತಿತಂತ್ರವನ್ನು ಅರ್ಥಮಾಡಿಕೊಳ್ಳೋದಿಕ್ಕೆ ನಡೆಸ್ತಾ ಇರುವ ಮುಖ್ಯವಾದ ಶೋಧ ಅಂತ. ಇದನ್ನ ಶೋಧ ಅಂತ ಯಾಕೆ ಕರೀತೀನಿ ಅಂದ್ರೆ, ಹೆಣ್ಣು ಯಾವ ಬದಲಾವಣೆಗಳಿಗಾಗಿ ಹಂಬಲಿಸ್ತಾ ಇದ್ದಾಳೋ ಅದು ಎಷ್ಟು ಮಹತ್ವದ್ದೋ ಅಷ್ಟೇ ಕಷ್ಟದ್ದೂ ಹೌದು ಅನ್ನೋದನ್ನ ಗ್ರಹಿಸುವುದಿದೆಯಲ್ಲ, ಅದು ನಮ್ಮ ಹೋರಾಟಕ್ಕೆ ಇನ್ನಷ್ಟು ಸ್ಪಷ್ಟತೆಯನ್ನ, ಗಾಂಭೀರ್ಯವನ್ನು ತಂದುಕೊಡುತ್ತೆ ಅಂತ. ಯಾಕಂದ್ರೆ ಹೆಣ್ಣಿನ ಮಟ್ಟಿಗೆ ಅವಳ ಅಭಿವ್ಯಕ್ತಿಯ ಎಲ್ಲವೂ ಚಳವಳಿಯೇ. ಅವಳ ಮಾತು, ಅವಳ ಸಂಗೀತ, ಅವಳ ಬರವಣಿಗೆ, ಅವಳ ಅಭಿನಯ, ಅವಳ ಚಿತ್ರಗಳು... ಅಲ್ಲವೇ? ಈ ಎಲ್ಲದರ ಮೂಲಕವೂ ಅವಳು ತನಗೆ ವಿಧಿಸಲಾಗಿರುವ ಎಲ್ಲ ನಿರ್ಬಂಧಗಳನ್ನೂ ನಿಷೇಧಗಳನ್ನೂ ಅವರದೇ ಭಾಷೆಯನ್ನ ಬಳಸ್ತಾನೇ, ಅದನ್ನ ಒಳಗೇ ಮುರಿತಾ ಇರ್ತಾಳೆ. ಅದೇ ಭಾಷೆ, ಅದೇ ಸಂಕೇತ, ಆದರೆ ಅರ್ಥ